ಕರ್ನಾಟಕ ಸರ್ಕಾರ

ಸಂಖ್ಯೆ: ಬಿಟಿಇ/16/ಇಎಫ್‌ಎಸ್/2017

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ.
ಅರಮನೆ ರಸ್ತೆ, ಬೆಂಗಳೂರು,
ದಿನಾಂಕ:10-07-2017.

**ಸುತ್ತೋಲೆ**

ವಿಷಯ:-ತಾಂತ್ರಿಕ ಪರೀಕ್ಷಾ ಮಂಡಳಿ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್,ಕಿರಿಯ ತಾಂತ್ರಿಕ ಶಾಲೆ ಮತ್ತು ಗಣಿ ಶಾಲೆಗಳು 2017 ರ ನವೆಂಬರ್ /ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಗೆ ಬೇಕಾಗಿರುವ ಲೇಖನ ಸಾಮಾಗ್ರಿಗಳ ಬೇಡಿಕೆ ಪಟ್ಟಿಯನ್ನು ಗೂಗಲ್ ನಮೂನೆ(Google format)ಯಲ್ಲಿ ಭರ್ತಿ ಮಾಡಿ ಕಳುಹಿಸುವ ಬಗ್ಗೆ

ಉಲ್ಲೇಖ:-ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/16/ಇಎಫ್‌ಎಸ್/2017 ದಿ:10.06.2017

********

ಉಲ್ಲೇಖದನ್ವಯ 2017 ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಗೆ ಬೇಕಾಗುವ ಲೇಖನ ಸಾಮಾಗ್ರಿಗಳನ್ನು ಪೂರೈಸಲು ಖರೀದಿ ಪ್ರಕ್ರಿಯೆಗೆ ಕ್ರಮಕೈಗೊಳ್ಳಬೇಕಾಗಿರುವುದರಿಂದ, ತಮ್ಮ ಸಂಸ್ಥೆಗಳಿಗೆ ಬೇಕಾಗುವ ಲೇಖನ ಸಾಮಾಗ್ರಿಗಳನ್ನು ಪತ್ರಕ್ಕೆ ಲಗತ್ತಿಸಿರುವ ಅನುಬಂಧ I ರ ನಮೂನೆಯನ್ನು dte.kar.nic.in ವೆಬ್‌ಸೈಟ್‌ನಲ್ಲಿ ಪಡೆದುಕೊಂಡು,ಭರ್ತಿ ಮಾಡಿ,ಸಂಸ್ಥೆಯ ಪ್ರಾಂಶುಪಾಲರು ವೈಯಕ್ತಿಕ ಗಮನಹರಿಸಿ ಲೇಖನ ಸಾಮಾಗ್ರಿಗಳ ಬೇಡಿಕೆ ಮಾಹಿತಿಯನ್ನು ದಿನಾಂಕ:15-07-2017 ರೊಳಗಾಗಿ ಇ-ಮೇಲ್ ಮುಖಾಂತರ **dtebteefs@gmail.com** ಹಾಗೂ ಒಂದು ಪ್ರತಿಯನ್ನು ಅಂಚೆ ಮೂಲಕ ಈ ಕಛೇರಿಗೆ ಕಳುಹಿಸುವಂತೆ ಸೂಚಿಸಲಾಗಿತ್ತು.

ಆದರೆ ಬೇಡಿಕೆ ಮಾಹಿತಿಯನ್ನು ಗೂಗಲ್ ನಮೂನೆ(Google format)ಯಲ್ಲಿ ಪಡೆಯ ಬೇಕಾಗಿರುವುದರಿಂದ 2017 ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಗೆ ಬೇಕಾಗುವ ಲೇಖನ ಸಾಮಾಗ್ರಿಗಳ ಬೇಡಿಕೆ ಪಟ್ಟಿಯನ್ನು ಈಗಾಗಲೇ ಸಲ್ಲಿಸಿರುವ ಮತ್ತು ಸಲ್ಲಿಸಬೇಕಾಗಿರುವ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್,ಕಿರಿಯ ತಾಂತ್ರಿಕ ಶಾಲೆ ಮತ್ತು ಗಣಿ ಶಾಲೆಗಳ ಪ್ರಾಂಶುಪಾಲರುಗಳು ಗೂಗಲ್ ನಮೂನೆ(Google format)ಯ **https://goo.gl/forms/JyGrQROGg7ISeZ0J2** ನ Google ಲಿಂಕ್ ನಲ್ಲಿ ಬೇಡಿಕೆ ಪಟ್ಟಿಯನ್ನು ಭರ್ತಿ ಮಾಡಿ ದಿನಾಂಕ:15-07-2017 ರೊಳಗಾಗಿ ಕಳುಹಿಸುವಂತೆ ಸೂಚಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು

**ಇವರಿಗೆ,**

ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್,ಕಿರಿಯ ತಾಂತ್ರಿಕ ಶಾಲೆ ಮತ್ತು ಗಣಿ ಶಾಲೆಗಳ ಪ್ರಾಂಶುಪಾಲರಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿ:-ಮಾಹಿತಿಗಾಗಿ**

1. ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು/ಹಿರಿಯ ತಾಂತ್ರಿಕ ಸಹಾಯಕರು/ ರಿಜಿಸ್ಟ್ರಾರ್ [ಪರೀಕ್ಷೆ]
2. ಇ- ಆಡಳಿತ ವಿಭಾಗಕ್ಕೆ ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ.
3. ಕಛೇರಿ ಪ್ರತಿ.